ಓಂಶ್ರೀಗುರುಬಸವಲಿಂಗಾಯನಮಃ

## ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮೀಜಿಗಳಿಗೆ ಭಾಲ್ಕಿ ಶ್ರೀಗಳ ಬೆಂಬಲ

ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮಿಗಳು ನಮ್ಮ ನಾಡಿನ ಪ್ರಗತಿಪರ ಚಿಂತನೆಯ ಧ್ವನಿಯಾಗಿದ್ದಾರೆ. ಬಸವಾದಿ ಶರಣರ ಹಾಗೂ ಬುದ್ಧ, ಫುಲೆ, ಅಂಬೇಡ್ಕರ್ ಅವರ ಚಿಂತನೆಗಳನ್ನು ನಿರ್ಭಿಡೆಯಿಂದ ಜನ-ಮನದಲ್ಲಿ ಬಿತ್ತುತ್ತ ವೈಚಾರಿಕ ಪ್ರಜ್ಞೆ ಬೆಳೆಸುತ್ತಿದ್ದಾರೆ. ಪ್ರಗತಿಪರ ಚಿಂತನೆಗಳಿಗೆ ವಿರುದ್ಧವಾಗಿರುವ ಪಟ್ಟಭದ್ರರು ಇದನ್ನು ವಿರೋಧಿಸುವುದಕ್ಕಾಗಿ ಸ್ವಾಮೀಜಿಯವರಿಗೆ ಬೆದರಿಕೆ ಕರೆ ಮಾಡುತ್ತಿದ್ದಾರೆ. ಇಂತಹ ಕೃತ್ಯಗಳಿಗೆ ಶರಣರ ವಾರಸುದಾರರು ಎಂದಿಗೂ ಅಂಜುವಿದಲ್ಲ. ಪಟ್ಟಭದ್ರರು ಬೆದರಿಸುವ ಮೂಲಕ ಪ್ರಗತಿಪರ ಚಿಂತನೆಗಳನ್ನು ಮುಚ್ಚಹಾಕಬೇಕೆಂದು ಇಂತಹ ಹುನ್ನಾರು ಮಾಡುತ್ತಲೇ ಇರುತ್ತಾರೆ. ಅದಕ್ಕೆ ಶ್ರೀ ನಿಜಗುಣಾನಂದ ಸ್ವಾಮಿಗಳು ಹೆದರಬೇಕಾಗಿಲ್ಲ. ಅವರ ಜೊತೆ ನಾಡಿನ ಬಸವಪರ ಚಿಂತನೆಯ ಅನೇಕ ಸಂಘಟನೆಗಳು ಇವೆ. ಪೂಜ್ಯರಿಗೆ ಬೆದರಿಕೆ ಹಾಕುತ್ತಿರುವುದು ಯಾರೆಂದು ಸರಕಾರ ಶೀಘ್ರದಲ್ಲಿ ಪತ್ತೆ ಹಚ್ಚಿ ಅವರ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದು ನಾವು ಸರಕಾರಕ್ಕೆ ಒತ್ತಾಯಿಸುತ್ತೇವೆ. ಜೊತೆಗೆ ನಾಡಿನ ಪ್ರಜ್ಞಾವಂತ ಸಮಾಜ ಸ್ವಾಮೀಜಿಯವರ ಚಿಂತನೆಗಳಿಗೆ ಬೆಂಬಲಿಸಬೇಕೆಂದು ಆಶಿಸುತ್ತೇವೆ.

**ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು**
ಹಿರೇಮಠ ಸಂಸ್ಥಾನ, ಭಾಲ್ಕಿ